<u>ಅಸಲು ದಾವಾಃ-</u> 204/2017 ಪಿ.ಡಬ್ಲ್ಯೂಃ- 4

ದಿನಾಂಕಃ 15.04.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಎಂ ಜೆ ವಕೀಲರಿಂದ</u>

ವಾದಿಯು ಯಾವ ಪರಿಹಾರ ಕೋರಿ ದಾವೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಅವರ ಸೈಟ್ ನಲ್ಲಿ ಬೇರೆಯವರು ಮನೆ ಕಟ್ಟಿರುತ್ತಾರೆ ಎಂದು ದಾವೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಪಳನಿಯಮ್ಮ ನನಗೆ ಏನಾಗಬೇಕು ಎಂದರೆ ನಮ್ಮ ತಾಯಿ. ಯಾವ ನಿವೇಶನವನ್ನು ನನ್ನ ತಾಯಿ ವಾದಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸೈಟ್ ನಂ.147 ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರ ನಿಪಿ 9 ಕ್ಕೆ ನೀವು ಸಹಿ ಮಾಡಿದ್ದೀರಾ ಎಂದರೆ ಹೌದು. ನನ್ನ ತಾಯಿಯು ವಾದಿಗೆ ಮಾರಾಟ ಮಾಡಿದ ಸೈಟ್ ನಂ.147 ರ ಚೆಕ್ಕುಬಂದಿ ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ನಾನು ಹಾಗೂ ನಮ್ಮ ತಾಯಿ ಪಳನಿಯಮ್ಮ ರವರು ವಾದಿಗೆ ನಿವೇಶನ ಸಂಖ್ಯೆ 147 ಎಂದು ಮಾರಾಟ ಮಾಡಿದ್ದೀರಾ ಅಥವಾ ನಿವೇಶನ ಸಂಖ್ಯೆ 156 ಎಂದು ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿಯು ಸೈಟ್ ನಂ.147 ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳ ಹಿಂದೆ ವಾದಿಗೆ ನಾವು ನಿವೇಶನ ಮಾರಾಟ ಮಾಡಿರುತ್ತೇವೆ ಎಂದರೆ 8-9 ವರ್ಷದ ಹಿಂದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಹೊಸಹಳ್ಳಿ ಸರ್ವೆ ನಂಬರ್ 68 ರಲ್ಲಿ ನನ್ನ ತಾಯಿಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ಎಷ್ಟು ಎಂದರೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 68 ರಲ್ಲಿ ಸೈಟ್ ನಂ.148 ಇದೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸೈಟ್ ನಂ.148 ರಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಗೊತ್ತಿಲ್ಲ. ವಾದಿಯ ಮಗ ಪಿಡಬ್ಲ್ಯೂ 2 ರವರ ಹೇಳಿಕೆಯ ಮೇರೆಗೆ ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಹಾಕಿರುತ್ತೇನೆ ಎಂದರೆ ಸರಿ. ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಂದ ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ